ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂ: ಸಿ7(4) ಪ್ರಾ.ಶಿ.ಅ. ಹೆ.ಶಿ-01/2011-12 ದಿನಾಂಕ: 20-08-2011

: ಜ್ಞಾಪನ :

ವಿಷಯ:- ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಮತ್ತು ಮರುಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ : (1)ಸರ್ಕಾರದ ಆದೇಶ ಸಂಖ್ಯೆ :ಇ.ಡಿ69ಎಸ್.ಒ.ಹೆಚ್ 2011, ದಿನಾಂಕ 31-3-2011.

(2) ಈ ಕಛೇರಿಯ ಪತ್ರ ಸಮಸಂಖ್ಯೆ ದಿನಾಂಕ 20-07-2011 ಮತ್ತು 11-08-2011.

(3) ಸರ್ಕಾರದ ಆದೇಶ ಸಂಖ್ಯೆ: ಇಡಿ 281 ಪಿಎಂಸಿ 2011 ದಿನಾಂಕ 19.8.2011

-**-**-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಸರ್ಕಾರದ ಆದೇಶದಂತೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಮತ್ತು ಮರು ಹೊಂದಾಣಿಕೆ ಮಾಡುವ ಬಗ್ಗೆ ಉಲ್ಲೇಖ (2)ರ ಈ ಕಛೇರಿಯ ಜ್ಞಾಪನದಂತೆ ಕ್ರಮವಹಿಸಲು ಈಗಾಗಲೇ ಸೂಚಿಸಿರುವುದನ್ನು ಸ್ಮರಿಸಿದೆ.

ಮುಂದುವರೆದು, ಸರ್ಕಾರದ ಪತ್ರದಂತೆ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು ಖಾಲಿಯಿರುವ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಮರು ಹೊಂದಾಣಿಕೆ ಮಾಡುವಾಗ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:40 ರಂತೆ ಲೆಕ್ಕ ಮಾಡಲು ತಿಳಿಸಿದೆ. ಈ ರೀತಿ ಲೆಕ್ಕ ಮಾಡುವಾಗ ತಾಲ್ಲೂಕು / ಜಿಲ್ಲೆಗಳಲ್ಲಿ ಅನುದಾನಿತ ಶಾಲೆಗಳಲ್ಲಿ ಖಾಲಿಯಿರುವ ಸ್ಥಳಗಳಿಗೆ ಹೆಚ್ಚುವರಿ ಶಿಕ್ಷಕರನ್ನು ಅದೇ ತಾಲ್ಲೂಕಿನಲ್ಲಿ / ಜಿಲ್ಲೆಯಲ್ಲಿ ಹಂಚಿಕೆ ಮಾಡುವುದು. ಹಂಚಿಕೆ ಮಾಡಿದ ನಂತರ ಉಳಿಯುವ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯ ಒಳಗೆ ಖಾಲಿಯಿರುವ ಅದೇ ತಾಲ್ಲೂಕು / ಜಿಲ್ಲೆಯಲ್ಲಿನ ಸರ್ಕಾರಿ ಶಾಲೆಗಳಲ್ಲಿ 1:30 ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಅನುಪಾತಕ್ಕಿಂತ ಹೆಚ್ಚಿಗೆ ಇರುವ ಶಾಲೆಗಳಲ್ಲಿ ತಾತ್ಕಾಲಿಕವಾಗಿ ವರ್ಕಿಂಗ್ ಅರೆಂಜ್‌ಮೆಂಟ್ (Working Arrangement ) ಆಗಿ ಒಂದು ವರ್ಷದ ಮಟ್ಟಿಗೆ ಅಥವಾ ಮುಂದೆ ಸರ್ಕಾರಿ ಶಾಲೆಗಳಲ್ಲಿ ಹೊಸ ನೇಮಕಾತಿ ಆಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಬಹುದಾಗಿದೆ.

**ಹೆಚ್ಚುವರಿ ಶಿಕ್ಷಕರನ್ನು ಮರು ಹಂಚಿಕೆ ಮಾಡುವಾಗ ಈ ಕೆಳಗಿನ ಕ್ರಮವನ್ನು ಅನುಸರಿಸಬೇಕಾಗುತ್ತದೆ.**

- ಜಿಲ್ಲೆಯಲ್ಲಿ ಹೆಚ್ಚುವರಿ ಶಿಕ್ಷಕರ ಜ್ಯೇಷ್ಠತಾ / ಆದ್ಯತಾ ಪಟ್ಟಿ ಸಿದ್ದಪಡಿಸುವುದು.
- ಜಿಲ್ಲೆಯಲ್ಲಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿನ ಖಾಲಿ ಹುದ್ದೆಗಳ ಸಂಖ್ಯೆಯನ್ನು ನಿರ್ಧರಿಸುವುದು.
- ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆಗನುಗುಣವಾಗಿ ಮೇಲೆ ತಿಳಿಸಿದ ಶಿಕ್ಷಕರ ಜ್ಯೇಷ್ಠತಾ / ಆದ್ಯತಾ ಪಟ್ಟಿಯ ಕೆಳಗಿನ ಕ್ರಮಾಂಕದಿಂದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಆದ್ಯತಾ ಪಟ್ಟಿಯನ್ನು ವಿಭಾಗಿಸುವುದು.
- ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆಯನ್ನು ಆಧರಿಸಿ ಹೆಚ್ಚುವರಿ ಶಿಕ್ಷಕರನ್ನು ಜ್ಯೇಷ್ಠತಾ ಪಟ್ಟಿಯ ಕೆಳಗಿನಿಂದ ಲೆಕ್ಕ ಹಾಕಿ ಎಷ್ಟು ಹುದ್ದೆಗಳು ಖಾಲಿ ಇವೆಯೋ ಅಷ್ಟು ಶಿಕ್ಷಕರನ್ನು ಮೂಲ ಪಟ್ಟಿಯಿಂದ ( ಜ್ಯೇಷ್ಠತೆಯನ್ನು ಉಳಿಸಿಕೊಂಡು) ಬೇರ್ಪಡಿಸಿ ಅನುದಾನಿತ

ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಮರು ಹಂಚಿಕೆ ಮಾಡುವುದು. ಅಂದರೆ ಅನುದಾನಿತ ಶಾಲೆಗಳ ಖಾಲಿ ಹುದ್ದೆಗಳ ಪಟ್ಟಿಯನ್ನು ಈಗಾಗಲೇ ನಿಗಧಿಪಡಿಸಿದ ದಿನಾಂಕದಂತೆ ಪ್ರಕಟಿಸಬೇಕಾಗಿದೆ.

- ಜಿಲ್ಲಾ ಶಿಕ್ಷಕರ ಜ್ಯೇಷ್ಠತಾ / ಆದ್ಯತಾ ಪಟ್ಟಿಯ ಮೇಲ್ಭಾಗದ ಪಟ್ಟಿಯಿಂದ ಉಳಿದ ಶಿಕ್ಷಕರನ್ನು (ಪಟ್ಟಿಯನ್ನು ವಿಭಾಗಿಸಿ ಕೆಳಭಾಗವನ್ನು ಬಿಟ್ಟು ಉಳಿದ ) ಜ್ಯೇಷ್ಠತಾ ಆಧಾರದ ಮೇಲೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ : ಶಿಕ್ಷಕರ ಅನುಪಾತ 1:30 ಕ್ಕಿಂತ ಮೇಲ್ಪಟ್ಟು ಇರುವ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ವರ್ಕಿಂಗ್ ಅರೆಂಜ್‌ಮೆಂಟ್ (Working Arrangement) ಆಗಿ ಒಂದು ವರ್ಷದ ಮಟ್ಟಿಗೆ ಆಥವಾ ಮುಂದೆ ಸರ್ಕಾರಿ ಶಾಲೆಗಳಲ್ಲಿ ಹೊಸ ನೇಮಕಾತಿಯಾಗುವವರೆಗೂ ಯಾವುದು [illegible] ಖಾಲಿಯಿರುವರೆಗೆ ನೇಮಿಸಬಹುದಾಗಿದೆ.
- ಮೇಲೆ ತಿಳಿಸಿದ ಕ್ರಮದಂತೆ ಮೊದಲಿಗೆ ಅನುದಾನಿತ ಪ್ರಾಥಮಿಕ ಶಾಲಾ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು ಮರು ಹಂಚಿಕೆ ಮಾಡುವುದು. ತದನಂತರ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:30ಕ್ಕಿಂತ ಹೆಚ್ಚಿಗೆ ಇರುವ ಸರ್ಕಾರಿ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಿಸುವುದು. ತಾತ್ಕಾಲಿಕವಾಗಿ ಸರ್ಕಾರಿ ಶಾಲೆಗಳಲ್ಲಿ ನೇಮಿಸಲಾದ ಶಿಕ್ಷಕರ ವೇತನವನ್ನು ಅವರುಗಳು ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಶಾಲೆಗಳಿಂದಲೇ ಪಡೆಯುವುದು ಎಂಬ ಷರತ್ತನ್ನು ವಿಧಿಸುವುದು.
- ಮೇಲ್ಭಾಗದ ಜ್ಯೇಷ್ಠತಾ ಪಟ್ಟಿಯಿಂದ ಸರ್ಕಾರಿ ಶಾಲೆಗಳಿಗೆ ಹಂಚಿಕೆ ಮಾಡಿ ಇನ್ನು ಉಳಿಕೆಯಾದ ಶಿಕ್ಷಕರಿದ್ದಲ್ಲಿ ಅಂತಹವರನ್ನು ಪಟ್ಟಿ ಮಾಡಿ ಆಯಾ ಆಯುಕ್ತಾಲಯಕ್ಕೆ ದಿನಾಂಕ 27.8.2011ರಂದು ಮುದ್ದಾಂ ಆಗಿ ಸಲ್ಲಿಸುವುದು. ಆಯಾ ಆಯುಕ್ತಾಲಯದಲ್ಲಿ ದಿನಾಂಕ 30.8.2011ರಂದು ಕೌನ್ಸಿಲಿಂಗ್ ಮೂಲಕ ಸದರಿ ಶಿಕ್ಷಕರಿಗೆ ವರ್ಕಿಂಗ್ ಅರೇಂಜ್ ಮೆಂಟ್ (Working Arrangement) ಮೂಲಕ ನೇಮಿಸಲಾಗುವುದು.

ಮಾನ್ಯ ಆಯುಕ್ತರ ಆದೇಶದ ಮೇರೆಗೆ,

ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)

ಇವರಿಗೆ

1. ಅಪರ ಆಯುಕ್ತರು ಧಾರವಾಡ ಮತ್ತು ಗುಲ್ಬರ್ಗಾ ರವರಿಗೆ ಕಳುಹಿಸುತ್ತಾ ಈ ಬಗ್ಗೆ ತಮ್ಮ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಬರುವ ಉಪನಿರ್ದೇಶಕರುಗಳಿಗೆ ಸೂಕ್ತ ಸೂಚನೆಯನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲು ಕೋರಿದೆ.
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

E:\cpe\ಹೆಚ್ಚುವರಿ ಶಿಕ್ಷಕರು.doc

ಹೆಚ್ಚುವರಿ ಶಿಕ್ಷಕರನ್ನು ಮರು ಹೊಂದಾಣಿಕೆ ಮಾಡುವ ಬಗ್ಗೆ ಸ್ಪಷ್ಟವಾಗಿ ಅರ್ಥವಾಗುವ ದೃಷ್ಟಿಯಿಂದ ಈ ಕೆಳಗಿನ ಉದಾಹರಣೆ ನೀಡಲಾಗಿದೆ.

ಒಂದು ಜಿಲ್ಲೆಯಲ್ಲಿ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ 100 ಹುದ್ದೆಗಳು ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 20 ಖಾಲಿ ಹುದ್ದೆಗಳು ಇದೆಯೆಂದು ಭಾವಿಸಿದಲ್ಲಿ ಇಂತಹ ಪ್ರಕರಣದಲ್ಲಿ ಮೊದಲಿಗೆ 100 ಹೆಚ್ಚುವರಿ ಶಿಕ್ಷಕರ ಜ್ಯೇಷ್ಠತಾ ಅಧ್ಯತಾ ಪಟ್ಟಿಯನ್ನು ತಯಾರಿಸುವುದು. 20 ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಜ್ಯೇಷ್ಠತಾ ಪಟ್ಟಿಯ ಕೆಳಭಾಗದಿಂದ ಅಂದರೆ 100 ರಿಂದ 80ರವರೆಗೆ ( 20 ಅಭ್ಯರ್ಥಿಗಳು) ಜ್ಯೇಷ್ಠತಾ ಆಧ್ಯತಾ ಪಟ್ಟಿಯನ್ನು ವಿಭಾಗಿಸಿ ಆ ಪಟ್ಟಿಯಲ್ಲಿನ 81ನೇ ಕ್ರಮಾಂಕದಿಂದ ಪ್ರಾರಂಭಿಸಿ 100ನೇ ಕ್ರಮಾಂಕದವರೆಗಿನ ತಮ್ಮ ಜಿಲ್ಲೆಯಲ್ಲಿ ಗುರುತಿಸಿ ಪ್ರಕಟಿಸಿರುವ 20 ಅನುದಾನಿತ ಖಾಲಿ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ಮರು ಹಂಚಿಕೆ ಮಾಡುವುದು.

ಮುಂದುವರೆಯುತ್ತಾ, ಜ್ಯೇಷ್ಠತಾ / ಆಧ್ಯತಾ ಪಟ್ಟಿಯ ಮೇಲ್ಭಾಗದ ಕ್ರಮಸಂಖ್ಯೆ 1 ರಿಂದ 80 ರವರೆಗೆ ಹೆಚ್ಚುವರಿ ಶಿಕ್ಷಕರನ್ನು ಸರ್ಕಾರಿ ಶಾಲೆಗಳ 1:30 ಅನುಪಾತಕ್ಕಿಂತ ಹೆಚ್ಚಾಗಿರುವ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ವರ್ಕಿಂಗ್ ಅರೇಂಜ್‌ಮೆಂಟ್ (Working Arrangement) ಮೂಲಕ 1 ವರ್ಷದವರೆಗೆ ನೇಮಿಸುವುದು. ಒಂದು ಪಕ್ಷ 1 ರಿಂದ 70 ಕ್ರಮ ಸಂಖ್ಯೆಯಲ್ಲಿನ ಹೆಚ್ಚುವರಿ ಶಿಕ್ಷಕರನ್ನು ಮೇಲೆ ತಿಳಿಸಿರುವ ಸರ್ಕಾರಿ ಶಾಲೆಗಳಿಗೆ ತಾತ್ಕಾಲಿಕವಾಗಿ ನೇಮಿಸಿದಾಗ ಇನ್ನುಳಿದ (10 ಶಿಕ್ಷಕರನ್ನು) ಅಂದರೆ 70 ರಿಂದ 80ರವರೆಗಿನ ಕ್ರಮಸಂಖ್ಯೆಯಲ್ಲಿರುವ ಹೆಚ್ಚುವರಿ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಆಯುಕ್ತಾಲಯಕ್ಕೆ ಕೌನ್ಸಿಲಿಂಗ್‌ಗೆ ಕಳುಹಿಸುವುದು.

ಇದೊಂದು ಉದಾಹರಣೆಗೆ ಮಾತ್ರ. ಬೇರೆ ಬೇರೆ ಜಿಲ್ಲೆಗಳಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಶಿಕ್ಷಕರ ಸಂಖ್ಯೆ, ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿನ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತ 1:30ಕ್ಕಿಂತ ಹೆಚ್ಚಾಗಿರುವ ಖಾಲಿ ಹುದ್ದೆಗಳ ಸಂಖ್ಯೆ ಬೇರೆ ಬೇರೆ ಇರಬಹುದು. ಆ ಸಂಖ್ಯೆಗಳನ್ನು ಆಧರಿಸಿ ಮೇಲಿನ ಉದಾಹರಣೆಯಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)

E:\GIA PRY\C7(4)\ಹೆಚ್ಚುವರಿ ಶಿಕ್ಷಕರು.doc